*TSSD. Vol. 1, Iss.1, Jan-Jun, 2021*

THE SOCIAL SCIENCE DIALOGUE

KUVEMPU UNIVERSITY THE SOCIAL SCIENCE DIALOGUE

Peer Reviewed Open Access Journal

Prasaranga, Kuvempu University

# ಸಾಮಾನ್ಯಜ್ಞಾನ ಪ್ರಸರಣೆಯಲ್ಲಿ ಶೈಕ್ಷಣಿಕ ಸಾಧನವಾಗಿ ಕನ್ನಡ ದಿನಪತ್ರಿಕೆಗಳ ಪಾತ್ರ: ಒಂದು ಪ್ರಾಯೋಗಿಕ ಅಧ್ಯಯನ

ಸತ್ಯಪ್ರಕಾಶ್ ಎಂ. ಆರ್.[1] & ವಿನಯ್ ಜಿ. ಪಿ.[2]

[1]ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – 577451, ಶಿವಮೊಗ್ಗ. ಈ–ಮೇಲ್: mrsathyaprakash@gmail.com.

[2]ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – 577451, ಶಿವಮೊಗ್ಗ. ಈ–ಮೇಲ್: vinaygpa@gmail.com

## ಸಾರಾಂಶ

*ಜಾಗತೀಕರಣದ ಈ ಕಾಲಘಟ್ಟದಲ್ಲಿ, ಪತ್ರಿಕೋದ್ಯಮದ ಸ್ವರೂಪ ಸಂಪೂರ್ಣ ಬದಲಾಗುತ್ತಿದೆ. ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಘಟಿಸಿದ ಘಟನೆಯನ್ನು ಕ್ಷಣಾರ್ಧದಲ್ಲಿ ಜಗತ್ತಿಗೆಲ್ಲಾ ತಿಳಿಸುವ ಶಕ್ತಿ, ಸಾಮರ್ಥ್ಯ ಹೊಂದಿರುವ ಮಾಧ್ಯಮಕ್ಷೇತ್ರ, ದಿನದಿನವೂ ಬದಲಾಗುವ ತಂತ್ರಜ್ಞಾನ, ನವಮಾಧ್ಯಮಗಳ ನಾಗಾಲೋಟದ ಬೆಳವಣಿಗೆಗಳ ಇಂದಿನ ದಿನಮಾನಗಳಲ್ಲಿ ಪತ್ರಿಕೆಗಳು ಪ್ರಸ್ತುತವೆ ಎಂಬ ಗಂಭೀರ ಚಿಂತನೆ ಸುಳಿಯದಿರಲು ಸಾಧ್ಯವಿಲ್ಲ. ಪತ್ರಿಕೆಗಳನ್ನು ದೇಶ–ವಿದೇಶಗಳ ವಿಶ್ವಾಸಾರ್ಹ, ನಿಖರ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳುವ ಶೈಕ್ಷಣಿಕ ಪ್ರಕ್ರಿಯೆ ಸಲುವಾಗಿ ಕೂಡ ಬಳಸುತ್ತಿರುವುದು ಬಹುತೇಕ ಅಧ್ಯಯನಗಳಿಂದ ತಿಳಿದುಬಂದಿದೆ. ಈ ರೀತಿ ಉಪಯುಕ್ತ ಮಾಹಿತಿ ಮತ್ತು ಸಾಮಾನ್ಯ ಜ್ಞಾನ ಒದಗಿಸುವ ಪತ್ರಿಕೆಗಳು ಜಾಗೃತ ನಾಗರೀಕನನ್ನು ಸೃಷ್ಟಿಸುವಲ್ಲಿ ನಿರ್ವಹಿಸಿರುವ ಪಾತ್ರವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ದಿನಪತ್ರಿಕೆಗಳು ಓದುಗರಿಗೆ ಸಾಮಾನ್ಯ ಜ್ಞಾನವನ್ನು ನೀಡುವ ಮೂಲಕ ಶೈಕ್ಷಣಿಕ ಸಾಧನವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ವಿಶ್ಲೇಷಿಸುವುದು ಅಧ್ಯಯನದ ಪ್ರಮುಖ ಉದ್ದೇಶ. ಆ ಮೂಲಕ ಓದುಗರ ಪ್ರಚಲಿತ ವಿದ್ಯಮಾನಗಳ ಅರಿವಿನ ಮಟ್ಟವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ದಿನಪತ್ರಿಕೆಗಳು ತನ್ನ ನಿರಂತರ ಓದುಗರಿಗೆ ಪ್ರಚಲಿತ ವಿದ್ಯಮಾನಗಳ ಕುರಿತು ಸ್ಪಷ್ಟವಾದ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಪ್ರಾದೇಶಿಕ ಹಂತದಿಂದ ಅಂತಾರಾಷ್ಟ್ರೀಯ ಮಟ್ಟದವರೆಗೆ ಸುದ್ದಿ, ಲೇಖನ, ಅಂಕಣಗಳಿತ್ಯಾದಿ ಮಾದರಿಗಳ ಮೂಲಕ ಸಮಗ್ರ ಮಾಹಿತಿ ನೀಡುವ ಪತ್ರಿಕೆಗಳನ್ನು ಪ್ರತಿನಿತ್ಯ ಓದುವುದು ಸಾಮಾನ್ಯ ಜ್ಞಾನ ವೃದ್ಧಿಗೆ ಪೂರಕವಾಗಿದೆ ಎಂದು ಅಧ್ಯಯನ ನಿರೂಪಿಸಿದೆ.*